# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮ.ವಿ./ಪ.ವಿ./ಸಿ.ಆರ್07/2021–22/೧.29

ಕುಲಸಚಿವ (ಪರೀಕ್ಷಾಂಗ)ರ ಕಛೇರಿ
ಮಂಗಳಗಂಗೋತ್ರಿ – 574 199.
ದೂರವಾಣಿ: 0824 2287659
ದಿನಾಂಕ: 18.10.2021

ರಿಗೆ

ನಿರ್ದೇಶಕರು
ದೂರಶಿಕ್ಷಣ ಕೇಂದ್ರ
ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ .

ಮಾನ್ಯರೇ

ವಿಷಯ : ಅಕ್ಟೋಬರ್ 2021ರ ಪರೀಕ್ಷೆಗೆ ಸಂಬಂಧಿಸಿ ದೂರಶಿಕ್ಷಣ ಕಾರ್ಯಕ್ರಮದ ದ್ವಿತೀಯ ವರ್ಷದ ಪದವಿ ವಿದ್ಯಾರ್ಥಿಗಳ ಫಲಿತಾಂಶದ ಬಗ್ಗೆ.

ಉಲ್ಲೇಖ : ಮಾನ್ಯ ಕುಲಪತಿಯವರ ಆದೇಶ ದಿನಾಂಕ ; 08.10.2021

**********

ಅಕ್ಟೋಬರ್ ನವೆಂಬರ್ 2021ರಂದು ಜರುಗಲಿರುವ ದ್ವಿತೀಯ ವರ್ಷದ ಪದವಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ (ನೋಂದಣಿ ಸಂಖ್ಯೆ 19____ರಿಂದ ಪ್ರಾರಂಭವಾಗುವ ವಿದ್ಯಾರ್ಥಿಗಳು ) ಈಗಾಲೇ ಅಕ್ಟೋಬರ್/ನವೆಂಬರ್ 2020ರ ಪ್ರಥಮ ವರ್ಷಕ್ಕೆ ಅಂತರಿಕ ಮೌಲ್ಯಮಾಪನ ಅಂಕದ ಮೇಲೆ ಫಲಿತಾಂಶವನ್ನು ಪ್ರಕಟಿಸಲಾಗಿರುತ್ತದೆ. ಸದರಿ ವರ್ಷದಲ್ಲಿ ಎಲ್ಲಾ ಕೋರ್ಸು/ಪತ್ರಿಕೆಗಳಲ್ಲಿ **ಉತ್ತೀರ್ಣರಾಗಿದ್ದ ವಿದ್ಯಾರ್ಥಿಗಳ** ಪ್ರಥಮ ವರ್ಷದಲ್ಲಿ ಪಡೆದಿರುವ ಶೇಕಡಾ 50% ಅಂಕಗಳು ಮತ್ತು ದ್ವಿತೀಯ ವರ್ಷದ ಅಂತರಿಕ ಮೌಲ್ಯಮಾಪನ ಅಂಕವನ್ನು ಶೇ 50% ಕ್ಕೆ ಉನ್ನತೀಕರಿಸಿ ಒಟ್ಟು ಸೇರಿಸಿ ದ್ವಿತೀಯ ವರ್ಷದ ಫಲಿತಾಂಶವಾಗಿ ಪ್ರಕಟಿಸಲಾಗುವುದು. ಈ ಹಂತದಲ್ಲಿ ದ್ವಿತೀಯ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಯಾವುದೇ ಪರೀಕ್ಷೆಗಳನ್ನು ನಡೆಸಲಾಗುವುದಿಲ್ಲ.

ಪದವಿ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಪದವಿ ಕಾರ್ಯಕ್ರಮವನ್ನು ಮುಗಿಸಿ ಅನುತ್ತೀರ್ಣರಾಗಿರುವ/ಹಿಂಬಾಕಿ ಇರುವ (ಪುನರಾವರ್ತಿತ) ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆ ನಡೆಸಲಾಗುವುದು.

ಸದರಿ ಸಾಲಿನಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಅಂತಿಮ ವರ್ಷದ ವಿದ್ಯಾರ್ಥಿಗಳು ಈ ವರ್ಷದ ಮತ್ತು ಹಿಂದಿನ ಎಲ್ಲಾ ವರ್ಷಗಳ ಹಿಂಬಾಕಿ ಕೋರ್ಸು/ಪತ್ರಿಕೆಗಳಿಗೆ ಪುನರಾವರ್ತಿತ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಅವಕಾಶವಿದೆ. ಈಗಾಗಲೇ ಪದವಿ ಪೂರೈಸಿ ಹಿಂದಿನ ವರ್ಷಗಳ ಕೋರ್ಸ್/ಪತ್ರಿಕೆಗಳಲ್ಲಿ ಅನುತ್ತೀರ್ಣರಾಗಿದ್ದರೆ ಅಂತಹ ವಿದ್ಯಾರ್ಥಿಗಳಿಗೆ ಹಿಂಬಾಕಿ ಕೋರ್ಸು/ಪತ್ರಿಕೆಗಳ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿದೆ.

ಉಳಿದಂತೆ ಕೋವಿಡ್ –19ರ ಮಾರ್ಗ ಸೂಚಿಯ ಷರತ್ತುಗಳು ಅನ್ವಯವಾಗುವುದು

ವಂದನೆಗಳೊಂದಿಗೆ

ಕುಲಸಚಿವರು (ಪರೀಕ್ಷಾಂಗ)